ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ ,
ಚಿಕ್ಕಮಗಳೂರು.

ದಿನಾಂಕಃ

ಸಿ.ಸಿ.ನಂ.**288/2019**

ಪಿರ್ಯಾದುದಾರರು : ಬಿ.ಸುಬ್ರಮಣ್ಯ ಭಟ್

ವಿರುದ್ಧ

ಆರೋಪಿ : ಕುಮಾರ ಸ್ವಾಮಿ N.

**ಆರೋಪಣೆ**

ಆರೋಪಿಯಾದ ನೀವು ಫಿರ್ಯಾದುದಾರರಿಂದ ರೂಃ10,00,000 ಗಳನ್ನು ನಿಮ್ಮ ತುರ್ತು ಅಗತ್ಯತೆಯ ಸಲುವಾಗಿ ಸಾಲವಾಗಿ ಪಡೆದುಕೊಂಡಿದ್ದು ಸದರಿ ಸಾಲದ ಮರುಪಾವತಿಗಾಗಿ ಕಳಸ ಶಾಖೆಯ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್ ದ ದಿನಾಂಕಃ18.06.2018 ರ ಚೆಕ್ ಸಂಖ್ಯೆ 044923 ನ್ನು ನೀಡಿದ್ದು, ಸದರಿ ಚೆಕ್ಕನ್ನು ನಗದುಗೊಳಿಸಲು ಹಾಜರುಪಡಿಸಿದಾಗ ಸದರಿ ಚೆಕ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಟೀಸ್ ನೀಡಿ ಸದರಿ ಸಂಗತಿಯನ್ನು ತಿಳಿಸಿದಾಗ್ಯೂ ಸಹ ನೀವು ಫಿರ್ಯಾದುದಾರಿಗೆ ನಿಯಮಿತ ಅವಧಿಯಲ್ಲಿ ಹಣವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿರುತ್ತೀರಿ. ಆ ಕಾರಣದಿಂದ ನೀವು ವಗಾರ್ವಣೀಯ ಲಿಖಿತಗಳ ಅಧಿನಿಯಮ ಕಲಂ 138 ರ ರೀತ್ಯ ಶಿಕ್ಷಾಹರ್ವಾದ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ಆರೋಪಣೆ ಹೊರಿಸಲಾಗಿದೆ.

1. ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ ಅರ್ಥವಾಯಿತು

2. ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ನಿಮಗೆ ಏನಾದರೂ ಪ್ರತಿರಕ್ಷೆ ಇದೆಯೇ?

ಉತ್ತರಃ ತಪ್ಪು ಮಾಡಿಲ್ಲ. / ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ, ವಿವರಿಸಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

19/10/19

**( ಹರೀಶ ಕೆ.ಎಂ . )**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಮೂಡಿಗೆರೆ .**

ಎಂವಿಪಿ